1) ಸಂತಾಪ ಸೂಚನೆ

ವಿಷಯ :- ಕಾರ್ಗಿಲ್‌ನಲ್ಲಿ ಮಡಿದ ವೀರ ಯೋಧರಿಗೆ ಶ್ರದ್ಧಾಂಜಲಿ

ಅಧ್ಯಕ್ಷರು : ಗೌರವಾನ್ವಿತ ಸದಸ್ಯರೇ, ಭಾರತದೇಶದ ಕಾರ್ಗಿಲ್ ಗಡಿಪ್ರದೇಶದಲ್ಲಿ ಉದ್ಭವವಾಗಿರುವ ಪರಿಸ್ಥಿತಿ ತಮಗೆಲ್ಲರಿಗೂ ಗೊತ್ತಿದೆ. ತಾಯ್ನಾಡಿನ ಪವಿತ್ರ ಭೂಮಿಯ ರಕ್ಷಣೆಗಾಗಿ ನಮ್ಮ ಯೋಧರು ತ್ಯಾಗಶೀಲ ಮನೋಭಾವನೆಯಿಂದ, ಅರ್ಪಣ ಮನೋಭಾವನೆಯಿಂದ ಹೋರಾಟ ಮಾಡುತ್ತಿದ್ದಾರೆ. ಅನೇಕ ಜನ ವೀರ ಯೋಧರು ತಮ್ಮ ಜೀವವನ್ನು ತ್ಯಾಗ ಮಾಡಿ ಈ ಪವಿತ್ರ ಭೂಮಿಯ ರಕ್ಷಣೆಗಾಗಿ ತಮ್ಮ ಕಾಣಿಕೆಯನ್ನು ಕೊಟ್ಟು ಹೋಗಿದ್ದಾರೆ. ಈ ರಾಷ್ಟ್ರದ ಒಂದು ಅವಿಭಾಜ್ಯ ಅಂಗವಾದ ಈ ಶಾಸನಸಭೆಯು ಕರ್ನಾಟಕ ರಾಜ್ಯದ ಎಲ್ಲಾ ಜನತೆಯ ಪರವಾಗಿ, ನಮ್ಮ ಪವಿತ್ರ ಭೂಮಿಯ ರಕ್ಷಣೆಗಾಗಿ ತಮ್ಮ ಜೀವ ತ್ಯಾಗ ಮಾಡಿದಂಥ ಆ ವೀರ ಯೋಧರಿಗೆ ನಮನ ಸಲ್ಲಿಸುವುದು ನಮ್ಮ ಆದ್ಯ ಕರ್ತವ್ಯ. ಅದರ ಜೊತೆ ಜೊತೆಗೆ ಈ ಜೀವ ತ್ಯಾಗದಿಂದ ನಷ್ಟವನ್ನು ಅನುಭವಿಸಿರುವ ಕುಟುಂಬಗಳು ಯಾವುವು ಇದ್ದಾವೆ, ಅವರಿಗೆ ನಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸತಕ್ಕಂಥದ್ದು, ಅವರ ಜೊತೆಗೆ ನಿಲ್ಲತಕ್ಕದ್ದು ನಮ್ಮ ಆದ್ಯ ಕರ್ತವ್ಯವೆಂದು ತಮಗೆ ನೆನಪಿಸುವುದಕ್ಕೆ ನಾನು ಇಷ್ಟಪಡುತ್ತಿದ್ದೇನೆ. ಈ ದಿವಸದ ಕಾರ್ಯಕಲಾಪದಲ್ಲಿ ಮೊದಲನೆ ಕಾರ್ಯಕ್ರಮ ನಾವು ಈ ಹೋರಾಟದಲ್ಲಿ ನಮಗಾಗಿ ತಮ್ಮ ಪ್ರಾಣತ್ಯಾಗ ಮಾಡಿದ ವೀರ ಯೋಧರಿಗೆ ನಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸುವುದು ಮತ್ತು ಈ ಅಧ್ಯಕ್ಷಪೀಠದ ಮುಖಾಂತರ ಎಲ್ಲಾ ಸದಸ್ಯರಲ್ಲಿ ನಾನು ಅತ್ಯಂತ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಮ್ಮ ಕಿರುಕಾಣಿಕೆಯಾಗಿ ಈ ಸದನದ ಎಲ್ಲಾ ಗೌರವಾನ್ವಿತ ಸದಸ್ಯರು ತಮ್ಮ ಒಂದು ತಿಂಗಳ ವೇತನವನ್ನು ಸಂತೋಷದಿಂದ, ಭಕ್ತಿಗೌರವಗಳಿಂದ ಈ ವೀರಯೋಧರ ಕುಟುಂಬಗಳ ಪುನರ್ವಸತಿ ಕಲ್ಯಾಣ ಕಾರ್ಯಕ್ರಮಕ್ಕಾಗಿ ದೇಣಿಗೆಯಾಗಿ ಕೊಡೋಣ ಎನ್ನುವ ಮಾತನ್ನು ಹೇಳುತ್ತೇನೆ. ಈ ನಿಟ್ಟಿನಲ್ಲಿ ತಾವೆಲ್ಲರೂ ನನ್ನೊಡನೆ ಸಹಕರಿಸಿ ಎದ್ದುನಿಂತು ಇವರ ಕುಟುಂಬಗಳಿಗೆ ಗೌರವ ಸೂಚಿಸಲು, ವೀರಯೋಧರಿಗೆ ಗೌರವ ಸೂಚಿಸಲು ಶ್ರದ್ಧಾಂಜಲಿಯನ್ನು ಅರ್ಪಿಸೋಣ ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

(ಈ ಸಂದರ್ಭದಲ್ಲಿ ಸದನವು ಒಂದು ನಿಮಿಷ ಎದ್ದು ನಿಂತು ಮೌನವನ್ನು ಆಚರಿಸಿತು)

ಕಳೆದ ಅಧಿವೇಶನದಿಂದ ಇಲ್ಲಿಯವರೆಗೆ ಮಧ್ಯಾವಧಿಯಲ್ಲಿ ನಮ್ಮನ್ನು ಅಗಲಿ ಹೋದ ಅನೇಕ ಜನ ಮಾಜಿ ಶಾಸಕರು ಮತ್ತು ಇನ್ನಿತರ ಗಣ್ಯರಿಗೆ ಕಾರ್ಯಕ್ರಮದ ಪಟ್ಟಿಯಪ್ರಕಾರ ಅವರಿಗೆ ಸಲ್ಲಿಸುವ ಶ್ರದ್ಧಾಂಜಲಿಯನ್ನು ನಾಳೆಗೆ ಮುಂದೂಡಿದ್ದೇವೆ. ಈ ದಿವಸ ನಾವು ಪ್ರಶ್ನೋತ್ತರವನ್ನು ತೆಗೆದುಕೊಳ್ಳುತ್ತಿದ್ದೇವೆ.

ರಾಜ್ಯದಲ್ಲಿ ಕನ್ನಡ ಆಡಳಿತ ಭಾಷೆಯಾಗದೇ ಇರುವ ಬಗ್ಗೆ :-

ಶ್ರೀ ವಾಟಾಳ್‌ನಾಗರಾಜ್ (ಚಾಮರಾಜನಗರ) : ಕನ್ನಡ ಭಾಷೆಯನ್ನು ಉಳಿಸಬೇಕೆಂದು ಈ ರಾಜ್ಯದಲ್ಲಿ ಕನ್ನಡ ಆಡಳಿತ ಭಾಷೆಯಾಗಿಲ್ಲ. ಇದರ ಬಗ್ಗೆ ನಾನು ನಿರಂತರವಾಗಿ ಒಂದೇ ಸಮನೆ ಪ್ರತಿ ಶಾಸನಸಭೆಯಲ್ಲೂ ನಾನು ಕೇಳಿದ್ದೇನೆ, ಒತ್ತಾಯ ಮಾಡಿದ್ದೇನೆ. ಗಡಿನಾಡನ್ನು ಮರೆತಿದ್ದಾರೆ, ಹೊರನಾಡಿನಲ್ಲಿರುವವರ ಬಗ್ಗೆ ಕನಿಷ್ಟಪಕ್ಷ ಜ್ಞಾಪಿಸಿಕೊಳ್ಳತಕ್ಕಂಥ ದೃಷ್ಟಿಯಿಲ್ಲ. ಕನ್ನಡದ ಬಗ್ಗೆ ಅಪಾರವಾದ ಕಳಕಳಿಯಿಲ್ಲ, ಕನ್ನಡ ಆಡಳಿತ ಭಾಷೆಯಾಗಿ ಸ್ಪಷ್ಟವಾಗಿ ಆಗಿಲ್ಲ, ಈ ರಾಜ್ಯದಲ್ಲಿ ಬರೀ ನಾಮಕಾವಸ್ತೆಗೆ ಮಾತನಾಡುತ್ತಿದ್ದೇವೆಯೇ ಹೊರತು ಆಡಳಿತ ಭಾಷೆ ಇಲ್ಲ. ನಾನು ಬಹಳ